ಸಿ.ಸಿ ನಂಃ 19/2024

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **17.11.2025.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಪಿರ್ಯಾದಿ ಪರ ವಕೀಲರಿಂದಃ**

ನನಗೆ ಪಿರ್ಯಾದಿಯ ಪರಿಚಯ ಇಲ್ಲ. ನಾನು ಕೆನರಾ ಬ್ಯಾಂಕ್ ನ ಚೆಕ್ ನ್ನು ಹೊಂದಿದ್ದೆ. ಚೆಕ್ ನ್ನು ನೋಡಿದರೆ ಅದು ನನಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದು ಗುರುತಿಸಬಹುದೇ ಎಂದರೆ, ಸಾಕ್ಷಿಗೆ ನಿಪಿ.1 ನ್ನು ತೋರಿಸಿ, ಕೇಳಲಾಗಿ , ಅದು ನನಗೆ ಸಂಬಂಧಿಸಿದ ಚೆಕ್ ಎಂದು ನುಡಿಯುತ್ತಾರೆ. ನಾನು ಕೋರ್ಟನಲ್ಲಿ, ಬ್ಯಾಂಕಿನಲ್ಲಿ, ಬೇರೆ ಕಚೇರಿಗಳಲ್ಲಿ ಸಹಿ ಮಾಡುತ್ತೇನೆ ಎಂದರೆ ಸರಿ. ನನ್ನ ಅನುಕೂಲಕ್ಕೆ ತಕ್ಕಂತೆ ಸಹಿ ಮಾಡುತ್ತಾ ಬಂದಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯನ್ನು ಹೊರತುಪಡಿಸಿ, ನನ್ನ ಬಳಿ ನನ್ನ ಕೇಸ್ ನ್ನು ರುಜುವಾತುಪಡಿಸಲು ದಾಖಲಾತಿಗಳು ಇಲ್ಲ ಎಂದರೆ ಸರಿ. ನನ್ನ ಅನುಕೂಲಕ್ಕೆ ತಕ್ಕಂತೆ ನನ್ನ ಮುಖ್ಯ ವಿಚಾರಣೆಯನ್ನು ನುಡಿದಿರುತ್ತೇನೆ ಎಂದರೆ, ಸಾಕ್ಷಿ ಏನು ಇದೆಯೋ ಅದನ್ನೇ ಹೇಳಿದ್ದೇನೆ ಎಂದು ನುಡಿಯುತ್ತಾರೆ. ದಿನಾಂಕಃ 28.10.2025 ರಂದು ನಾನು ನುಡಿದ ಸಾಕ್ಷ್ಯಕ್ಕೆ ಮಾಡಿದ ಸಹಿಯನ್ನೇ ಚೆಕುಗಳಿಗೆ ಮಾಡುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದಿಯ ಬಳಿ ಕೆಲಸಕ್ಕೆ ಇದ್ದೆ ಎಂದು ಹೇಳಿದ್ದು, ಕೆಲಸಕ್ಕೆ ಇದ್ದ ಮೇಲೆ ನನಗೆ ಪರಿಚಯವಿರುತ್ತದೆ ಎಂದರೆ ಸರಿ . ನಾನು ಪಿರ್ಯಾದಿಗೆ ಕೊಡತಕ್ಕ ಹಣದ ಭಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ, ದಿನಾಂಕಃ 28.10.2025 ರಂದು ನಾನು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯ ಬಳಿ ಉದ್ದರಿ ಮೇರೆಗೆ ಕಡಿ ಮತ್ತು ಉಸುಕನ್ನು ಖರೀದಿಸುತ್ತಾ ಬಂದಿರುತ್ತೇನೆ ಎಂದರೆ, ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಕಡಿ ಮತ್ತು ಉಸುಕನ್ನು ಕೊಡುವುದು ಮತ್ತು ತೆಗೆದುಕೊಳ್ಳುವ ಬಗ್ಗೆ ನನಗೆ ಸಾಕಷ್ಟು ಮಾಹಿತಿ ಇದೆ ಎಂದರೆ, ಇದೆ. ಆದ ಕಾರಣ, ನಾನು ಪಿರ್ಯಾಗೆ 2,00,000/- ರೂಪಾಯಿಗಳನ್ನು ಕೊಡಲು ಭಾಧ್ಯಸ್ಥ ಎಂದರೆ ಸರಿಯಲ್ಲ. ಈ ಪ್ರಕರಣದ ಭಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಾನು ನನ್ನ ವಕೀಲರ ಮುಖಾಂತರ, ಒಂದು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸಲ್ಲಿಸಿದ್ದೇನೆ.

ಸಾಕ್ಷಿಗೆ ನಿಪಿ.1 ನ್ನು ತೋರಿಸಿ ಕೇಳಲಾಗಿ, ಅದರಲ್ಲಿರುವ ಸಹಿ ನ್ನನದಲ್ಲ ಎಂದು ನುಡಿಯುತ್ತಾರೆ. ಸದರಿ ಸಹಿ ನನ್ನದಾಗಿದ್ದರೂ ಸಹಿತ , ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಚೆಕ್ ಕೊಟ್ಟಿದ್ದು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾಯೊಂದಿಗೆ ಮಾಡಿಕೊಂಡ ವ್ಯವಹಾರದ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇದ್ದರೂ ಸಹಿತ, ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**